## ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕದ ಮಾರ್ಗಸೂಚಿ

ಬೆಳೆ ಕಟಾವಿನ ನಂತರ ಈರುಳ್ಳಿಯನ್ನು ಬಹು ದಿನಗಳ ಕಾಲ ಸುರಕ್ಷಿತವಾಗಿ ಶೇಖರಣೆ ಮಾಡಲು ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕಗಳು ಅತ್ಯವಶ್ಯಕವಾಗಿರುತ್ತದೆ. ಇದಕ್ಕಾಗಿ ಕನಿಷ್ಟ 25 ಮೆಟ್ರಿಕ್ ಟನ್ ಶೇಖರಣಾ ಸಾಮರ್ಥ್ಯವಿರುವ ಘಟಕವು ಸೂಕ್ತವಾಗಿದೆ (ಬಿದಿರಿನಿಂದ ಅಥವಾ ಮರದ ರೀಪರ್ಸ್ ನಿಂದ). ಪ್ರತಿ ಘಟಕಕ್ಕೆ ರೂ. 1.75 ಲಕ್ಷಗಳವರೆಗೆ ಯೋಜನಾ ಪ್ರಸ್ತಾವನೆ ವೆಚ್ಚವು ಇದ್ದು, ಇದರಲ್ಲಿ ಶೇ. 50% ರಂತೆ ಗರಿಷ್ಠ ರೂ. 0.875 ಲಕ್ಷದವರೆಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಹಾಯಧನ ನೀಡಲು ಅವಕಾಶವಿರುತ್ತದೆ (on prorate basis of Storage Capacity in cub.mt).

ಈರುಳ್ಳಿ ಹೆಚ್ಚು ತೇವಾಂಶಭರಿತ ಬೆಳೆಯಾಗಿದ್ದು, ಶೀಘ್ರವಾಗಿ ಹಾಳಾಗುವ ಗುಣ ಹೊಂದಿರುವ ಕಾರಣ, ಈರುಳ್ಳಿ ಬೆಳೆ ಕಟಾವಾದ ನಂತರ ಅನೇಕ ದಿನಗಳವರೆಗೂ ಹಾಳಾಗದಂತೆ ಸುಸ್ಥಿತಿಯಲ್ಲಿ ಶೇಖರಿಸಿ ಇಡಲು ಕಡಿಮೆ ವೆಚ್ಚದಲ್ಲಿ ಈರುಳ್ಳಿ ಶೇಖರಣಾ ಘಟಕವನ್ನು ನಿರ್ಮಿಸಲು ಸಹಾಯಧನದ ಸೌಲಭ್ಯವನ್ನು ಕಲ್ಪಿಸಿ ಈರುಳ್ಳಿ ಬೆಳೆಗಾರರಿಗೆ ಉತ್ತೇಜನವನ್ನು ನೀಡುವುದು.

**ತಾಂತ್ರಿಕ ವೈಶಿಷ್ಟತೆಗಳು:-**

1. ಈರುಳ್ಳಿ ಶೇಖರಣಾ ಘಟಕವು 12 ಮೀಟರ್ ಉದ್ದ x 3.60 ಮೀ ಅಗಲ x 1.80 ಮೀ (ಬದಿಯ ಎತ್ತರ) x 2.10 ಮೀ (ಮದ್ಯದ ಎತ್ತರ) ಇದ್ದು, 90 ಘ.ಮೀ ಒಳಾಂಗಣ ಸಾಮರ್ಥ್ಯವನ್ನು ಹೊಂದಿರಬೇಕು.
2. ನಿಗಧಿಪಡಿಸಿರುವ ಮಾದರಿ ನಕ್ಷೆಯಂತೆ ಈರುಳ್ಳಿ ಶೇಖರಣಾ ಘಟಕ ನಿರ್ಮಾಣ ಮಾಡುವುದು ಕಡ್ಡಾಯವಾಗಿ ಇರುತ್ತದೆ ಅಥವಾ ಈಗಾಗಲೇ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯವರು ಸ್ಥಳೀಯ ಮಾದರಿಯ ಈರುಳ್ಳಿ ಶೇಖರಣಾ ಘಟಕಗಳನ್ನು ನಿರ್ಮಿಸಲು ನಿರ್ದೇಶನಾಲಯದಿಂದ ಅನುಮತಿ ಪಡೆದಿರುವ ನಕ್ಷೆಗಳಂತೆಯೂ ಸಹ ಘಟಕ ನಿರ್ಮಿಸಬಹುದು (ನಕ್ಷೆ ಅನುಬಂಧಿಸಿದೆ).
3. ಗೋದಾಮಿನ ತಳ (Base/Floor) ವನ್ನು ನೆಲಮಟ್ಟದಿಂದ ಕನಿಷ್ಠ 2ft ಎತ್ತರಿಸಿದ ರೀತಿಯಲ್ಲಿದ್ದು, ಕೆಳಗಿನಿಂದ ಮತ್ತು ಎಲ್ಲಾ ಬದಿಗಳಿಂದಲೂ ಸರಾಗವಾಗಿ ಗಾಳಿಯು ಸುಳಿದಾಡುವಂತಿರಬೇಕು ಹಾಗೂ ಘಟಕದ ಮೇಲ್ಚಾವಣಿಯು ಹಂಚು / asbestos/Tin sheet ಅಥವಾ ಸ್ಥಳೀಯವಾಗಿ ದೊರೆಯುವ ಕೃಷಿ ಹಾಗೂ ಅರಣ್ಯದ ವಸ್ತುಗಳನ್ನು ಉಪಯೋಗಿಸಿ ರಚಿಸಬಹುದು (ಮಳೆಯ ನೀರು ಘಟಕದ ಒಳಗೆ ಹೋಗದಂತೆ ಮೇಲ್ಚಾವಣಿಯು ನಿರ್ಮಾಣವಾಗಿರಬೇಕು).
4. ಈರುಳ್ಳಿ ದಾಸ್ತಾನು ಮಳಿಗೆ / ದಾಸ್ತಾನು ಮಾಡುವ ಸ್ಥಳದ ಸುರಕ್ಷಿತ ದೃಷ್ಟಿಯಿಂದ ರೈತರಿಗೆ ಅನುಕೂಲವಾಗುವ ತಮ್ಮ ಸ್ವಂತ ಜಾಗದಲ್ಲಿ ನಿರ್ಮಿಸಬೇಕು. ಉದ್ದೇಶಿತ ಸ್ಥಳದ ಪಹಣಿ ಅಥವಾ ಭೂದಾಖಲೆಗಳು ರೈತನ ಹೆಸರಿನಲ್ಲಿರುವುದು ಕಡ್ಡಾಯವಾಗಿರುತ್ತದೆ.

(14)

ಈರುಳ್ಳಿ ಶೇಖರಣಾ ಘಟಕ ನಿರ್ಮಾಣ ಮಾಡಲು ತಗಲುವ ಅಂದಾಜು ವೆಚ್ಚ:

| Sl. No. | Total Qty. | Description | Rate | Unit | Amount (Rs.) |
|---|---|---|---|---|---|
| 1 | 3.888 | Excavation for foundation | 87 | LS | 340.00 |
| 2 | 0.729 | P.C.C 1:4:8 in foundation | 1970 | Cu.m | 1,436.00 |
| 3 | 2.339 | R.C.C 1:2:4 for columns | 3482 | Cu.m | 8,144.00 |
| 4 | 320 | Nominal Reinforcement of columns | 53 | Kg. | 16,800.00 |
| 5 | 1200 | Structural works | 70 | Kg. | 84,000.00 |
| 6 | 83.2 | A/C Sheet Roofing | 350 | Sq.m | 29,120.00 |
| 7 | 13 | A/C Sheet Ridge | 210 | Rmt. | 2,730.00 |
| 8 | 1454.4 | 2" Dial ½ Bamboo or wooden strips @ 3" C/C | 17 | Rmt. | 25,430.00 |
| 9 | | Other Miscellaneous | | | 7,000.00 |
| **Total** | | | | | **1,75,000.00** |

**ಫಲಾನುಭವಿಗಳ ಅರ್ಹತೆ:-**

1. ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರವನ್ನು ಪಡೆದಿರಬೇಕು. ತಂದೆ ಅಥವಾ ತಾಯಿಯ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿದ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿಯನ್ನು ಸಲ್ಲಿಸುವುದು.
2. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
3. ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿಯನ್ನು ಹೊಂದಿರಬೇಕು.
4. ಈರುಳ್ಳಿ ಶೇಖರಣಾ ಘಟಕಕ್ಕೆ ಸಹಾಯಧನ ಪಡೆಯಲು ಉದ್ದೇಶಿಸುವ ಫಲಾನುಭವಿಯು ಕನಿಷ್ಠ 0.4 ಹೆ. ಪ್ರದೇಶದಲ್ಲಿ ಈರಳ್ಳಿ ಬೆಳೆಯನ್ನು ಬೆಳೆದಿರಬೇಕು.
5. ಈರುಳ್ಳಿ ಶೇಖರಣಾ ಘಟಕಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ದೃಢೀಕರಣ ಪತ್ರ ಪಡೆದುಕೊಳ್ಳುವುದು.

**<u>ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-</u>**

1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ತಾಲ್ಲೂಕಿನ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು.
2. **ರೈತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳ ಅಂತಿಮ ಪಟ್ಟಿ ಮಾಡಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡುವುದು.**
3. ಅಧಿಸೂಚನೆಯಲ್ಲಿ, ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾದ ಮಾಹಿತಿ ಇರತಕ್ಕದ್ದು.
4. **ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ / ಸತೋನಿ ಕಛೇರಿಗೆ ಅಥವಾ ಆನ್ ಲೈನ್ ಮೂಲಕ FRUITS ತಂತ್ರಾಂಶದಲ್ಲಿ ಸಲ್ಲಿಸುವುದು.**
   a. ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿಯ ವಿವರಗಳನ್ನು ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ
   b. ಪ್ರಸಕ್ತ ಸಾಲಿನ ಪಹಣಿ (RTC) (ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು) ಲಗತ್ತಿಸಬೇಕು.
   c. ತಾಲ್ಲೂಕು ಮಟ್ಟದ ಅಧಿಕಾರಿಗಳು ಅರ್ಜಿಯನ್ನು ಪರಿಶೀಲಿಸಿದ ನಂತರ ಫಲಾನುಭವಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ತಮ್ಮ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.
   d. ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಪಾಲಿಸಿಕೊಂಡು ಜಿಲ್ಲಾ ಸಮಿತಿಯ ಗಮನಕ್ಕೆ ತಂದು ಜಿಲ್ಲಾ ಸಮಿತಿಯ ಮುಖಾಂತರ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಫಲಾನುಭವಿಯನ್ನು ಆಯ್ಕೆ ಮಾಡಬೇಕು.
5. ತಾಲ್ಲೂಕು ಹಿಸತೋನಿ/ಸತೋನಿರವರು ಅರ್ಜಿ ಹಾಗೂ ಮೇಲ್ಕಂಡ ಈರುಳ್ಳಿ ಶೇಖರಣಾ ಘಟಕ ದಾಖಲಾತಿಗಳನ್ನು ಪರಿಶೀಲಿಸಿ, ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ ಸಹಾಯಧನದ ಅರ್ಜಿಯನ್ನು ತೋಉನಿ (ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು. ತೋಟಗಾರಿಕೆ ಉಪ-ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ತಾಲ್ಲೂಕುವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.

(12)

6. ಜಿಲ್ಲೆಯ ತೋಉನಿ (ಜಿಪಂ) ರವರು ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯ ಮಿತಿಯಲ್ಲಿ ಫಲಾನುಭವಿಗೆ work Order/ letter of intent ನ್ನು ನೀಡುವುದು.
7. ತೋಉನಿ (ಜಿಪಂ) ರವರಿಂದ work order /letter of intent ಪಡೆದ ನಂತರ ರೈತರು ಸದರಿ ಯೋಜನೆಯ ಅನುಸಾರ ಕಾಮಗಾರಿಯನ್ನು ಪ್ರಾರಂಭಿಸಿ ನಿಗಧಿತ ಅವಧಿಯೊಳಗೆ ಮುಗಿಸಬೇಕು.
8. ತೋಉನಿ (ಜಿಪಂ) ರವರಿಂದ work order ನೀಡಲಾದ ನಂತರ ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಫಲಾನುಭವಿಯೊಂದಿಗೆ ತಾಕುಗಳನ್ನು ಪರಿಶೀಲಿಸಿ ಯೋಜನೆಯ ಅನುಷ್ಠಾನದ ಗುಣಮಟ್ಟ ಹಾಗೂ ಈರುಳ್ಳಿ ಶೇಖರಣಾ ಘಟಕ ಅಳವಡಿಸಿರುವ ಪ್ರಮಾಣ ಕುರಿತಂತೆ ತೃಪ್ತಿಕರವಾಗಿದ್ದಲ್ಲಿ, ಅನುಷ್ಠಾನದ ವಿವರ ಹಾಗೂ ಫಲಾನುಭವಿಗಳ ಸಮೇತ ಛಾಯಚಿತ್ರಗಳು ಹಾಗೂ ವರದಿಯನ್ನು ಸತೋಅ (RSK) ಹಾಗೂ ಹಿಸತೋನಿ ರವರ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು.
9. ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನದ ಅರ್ಜಿ ಮತ್ತು ದಾಖಲಾತಿಗಳನ್ನು ಪರಿಶೀಲಿಸುವುದು.
10. ಪ್ರಸ್ತಾವನೆಯೊಂದಿಗೆ ಉದ್ದೇಶಿತ ಘಟಕದ ನಕ್ಷೆ ಹಾಗೂ ಅಂದಾಜು ಪಟ್ಟಿಯನ್ನು ನೋಂದಾಯಿತ ಇಂಜಿನಿಯರ್ ಅಥವಾ Architect ಅಥವಾ ಸರ್ಕಾರದ ಯಾವುದೇ ಇಲಾಖೆಯ ಇಂಜಿನಿಯರ್ ರವರಿಂದ/ನಿವೃತ್ತ ಇಂಜಿನಿಯರ್ ರವರಿಂದ ದೃಢೀಕರಿಸಿದ ಪ್ರತಿಯೊಂದಿಗೆ ಸಲ್ಲಿಸುವುದು (Plan & Estimate).
11. ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ. 100 ರಷ್ಟು) ಘಟಕಗಳನ್ನು ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ಪರಿಶೀಲಿಸಿದ ಘಟಕಗಳ ಪೈಕಿ ಕನಿಷ್ಟ ಶೇ. 50 ರಷ್ಟು ಘಟಕಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನತೆಗಳಿದ್ದರೆ ಅರ್ಜಿಯನ್ನುತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.
12. **ಜಿಲ್ಲೆಯ ತೋಉನಿ (ಜಿಪಂ) ರವರು ಶೇ.10 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 5 ರಷ್ಟು ಘಟಕಗಳನ್ನು ಹಾಗೂ ಸತೋಅ ರವರು ಪರಿಶೀಲಿಸಿರುವ ಶೇ. 5 ರಷ್ಟು ಘಟಕಗಳನ್ನು ಮರುಪರಿಶೀಲನೆ ಮಾಡುವುದು.**
13. ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಹಿಸತೋನಿ / ಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.
14. **ವಿಭಾಗೀಯ ಜಂಟಿ ನಿರ್ದೇಶಕರು ರವರು ಶೇ. 5 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ. 2 ರಷ್ಟು ಘಟಕಗಳನ್ನು ಹಾಗೂ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 3 ರಷ್ಟು ಘಟಕಗಳನ್ನು ಮರುಪರಿಶೀಲನೆ ಮಾಡುವುದು.**
15. **ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು ರವರು ಶೇ.1 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು ಪರಿಶೀಲಿಸಿರುವ ಶೇ.0.5 ರಷ್ಟು ಘಟಕಗಳನ್ನು ಹಾಗೂ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ.0.5 ರಷ್ಟು ಘಟಕಗಳನ್ನು ಮರುಪರಿಶೀಲನೆ ಮಾಡುವುದು.**

16. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಛಾಯಚಿತ್ರಗಳನ್ನು ದಾಖಲಿಸುವುದು.

17. ರೈತರು ಬೆಳೆಯುವ ಬೆಳೆಯನ್ನು ಪಹಣಿಯಲ್ಲಿ ನಮೂದಿಸದೆ ಇರುವ ಪಕ್ಷದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ಯಿಂದ ಬೆಳೆಯನ್ನು ದೃಢೀಕರಿಸಿದ ಅರ್ಜಿಗಳನ್ನು ಪರಿಗಣಿಸುವುದು.

18. ಪ್ರಸ್ತಾವನೆಯೊಂದಿಗೆ ಸಲ್ಲಿಸುವ ಎಲ್ಲಾ ದಾಖಲಾತಿ ಪತ್ರಗಳಿಗೆ ಆಯಾ ರೈತ ಸಂಪರ್ಕ ಕೇಂದ್ರದ ಸತೋಅ ಮತ್ತು ತಾಲ್ಲೂಕಿನ ಹಿಸತೋನಿ/ಸತೋನಿ ರವರು ಕಡ್ಡಾಯವಾಗಿ ದಿನಾಂಕ ಮತ್ತು ಸಹಿಯೊಂದಿಗೆ ದೃಢೀಕರಣ ಮಾಡಬೇಕು.

**<u>ತಾಂತ್ರಿಕ ಪರಿಶೀಲನಾ ಕ್ರಮಗಳು:-</u>**

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠಾನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

- ಪ್ರಸ್ತಾವನೆಯೊಂದಿಗೆ ಅಡಿಪಾಯ ಹಾಕಿದ ಸಮಯದಲ್ಲಿ ಹಾಗೂ ಮೇಲ್ಛಾವಣಿ ಹಂತಕ್ಕೆ ಬಂದ ಸಮಯದಲ್ಲಿ 4 ದಿಕ್ಕುಗಳಿಂದ ಸಂಪೂರ್ಣ ಕಟ್ಟಡ ಕಾಣುವಂತೆ ಫಲಾನುಭವಿಯೊಂದಿಗೆ ಸಂಬಂಧಿಸಿದಂತೆ ರೈತ ಸಂಪರ್ಕ ಕೇಂದ್ರದ ಅಧಿಕಾರಿ/ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ತೆಗೆದಿರುವ ಛಾಯಚಿತ್ರಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.
- ರೈತರು ಈರುಳ್ಳಿ ಶೇಖರಣಾ ಘಟಕವನ್ನು ಮಾರ್ಗಸೂಚಿ ಮತ್ತು ಅಂದಾಜು ಪಟ್ಟಿಯಂತೆ ನಿರ್ಮಿಸಿರುವ ಬಗ್ಗೆ ಪರಿಶೀಲಿಸಬೇಕು.

**<u>ಸಹಾಯಧನ ವಿತರಣೆ:-</u>**

1. ಜಿಲ್ಲೆಯ ತೋಉನಿ(ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಈರುಳ್ಳಿ ಶೇಖರಣಾ ಘಟಕ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಈ ಕೆಳಕಂಡ ಯಾವುದಾದರು ಒಂದು ವಿಧಾನದಲ್ಲಿ ಬಿಡುಗಡೆ ಮಾಡುವುದು.
2. ಈರುಳ್ಳಿ ಶೇಖರಣಾ ಗೋದಾಮು ಕಾಮಗಾರಿಯು ಪೂರ್ಣಗೊಂಡಿರುವ ಬಗ್ಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿ ಹಾಗೂ ತಾಲ್ಲೂಕು ಅಧಿಕಾರಿಯವರು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ಖಚಿತಪಡಿಸಿಕೊಳ್ಳುವುದು ಹಾಗೂ ಪೂರ್ಣಗೊಂಡಿರುವ ಘಟಕದ ಛಾಯಚಿತ್ರಗಳನ್ನು ಪಡೆದುಕೊಂಡು ನಂತರವೇ ಅಂತಿಮ ಸಹಾಯಧನ ಬಿಡುಗಡೆ ಮಾಡುವುದು ಕಡ್ಡಾಯವಾಗಿರುತ್ತದೆ.
3. ಫಲಾನುಭವಿಯ ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲಾಂಛನ (LOGO) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಈರುಳ್ಳಿ ಶೇಖರಣಾ ಘಟಕದ ಮುಂಭಾಗದಲ್ಲಿ ಪ್ರದರ್ಶಿಸಬೇಕು.

(10)

**ಆರ್ಥಿಕ ಪ್ರತ್ಯಾ ಯೋಜನೆ (Delegation of Power):**

ಈ ಕಾರ್ಯಕ್ರಮದಲ್ಲಿ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ-3ಟಿಎಫ್ ಪಿ2018 ದಿನಾಂಕ:14.5.2018ರ ರನ್ವಯ ಕಾಲ ಕಾಲಕ್ಕೆ ಪರಿಷ್ಕೃತವಾಗುವ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಆರ್ಥಿಕ ಇಲಾಖೆಯ ಆರ್ಥಿಕ ಪ್ರತ್ಯಾಯೋಜನೆಯ ಮಾರ್ಗಸೂಚಿಯನ್ನು ಪಾಲಿಸುವುದು.

**ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು (Reporting and documentation ):**

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 2ನೇ ದಿನಾಂಕದ ಒಳಗಾಗಿ ತಪ್ಪದೇ KSHMA ಕಛೇರಿಗೆ ಸಲ್ಲಿಸುವುದು.
2. **ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ 3ನೇ ತ್ರೈಮಾಸಿಕದ (3rd trimester) ಒಳಗಾಗಿ ಅನುದಾನದ ಬೇಡಿಕೆಯನ್ವಯ ಅಂತರ ಘಟಕಗಳಲ್ಲಿ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು. ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.**
3. ಎಲ್ಲಾ ಫಲಾನುಭವಿಗಳನ್ನೊಳಗೊಂಡ ಜಿಪಿಎಸ್ ಫೋಟೋಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೇ ಇಲಾಖಾ ವೆಬ್ ಸೈಟ್ ನಲ್ಲಿ ಅಳವಡಿಸಲು ಅಗತ್ಯ ಕ್ರಮವಹಿಸುವುದು.
4. ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ಕಾರ್ಯನಿರ್ವಾಹಕ ನಿರ್ದೇಶಕರು, KSHMA ಮತ್ತು ತೋಟಗಾರಿಕೆ ಮಾಹಿತಿ ಕೇಂದ್ರ ರವರಿಗೆ ಕಳುಹಿಸುವುದು.
5. 2022-23 ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ವಿವರವನ್ನು ಕಡ್ಡಾಯವಾಗಿ KSHMA ಕಛೇರಿಗೆ ಕಳುಹಿಸುವುದು.

➢ ಮುಂದಿನ ಆದೇಶ ನೀಡುವವರೆಗೂ ಈ ಮಾರ್ಗಸೂಚಿ ಚಾಲ್ತಿಯಲ್ಲಿರುತ್ತದೆ.

ಮಿಷನ್ ನಿರ್ದೇಶಕರು

ಮತ್ತು

ತೋಟಗಾರಿಕೆ ನಿರ್ದೇಶಕರು

(೯)

## ಈರುಳ್ಳಿ ಶೇಖರಣಾ ಘಟಕದ ಚೆಕ್ ಲಿಸ್ಟ್:

| | | |
|---|---|---|
| 1 | ಫಲಾನುಭವಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆಯೇ ? (ಅನುಬಂಧ-5) | ಹೌದು/ಇಲ್ಲ |
| 2 ಅ)<br>ಆ) | ಫಲಾನುಭವಿಯು ಮಾರ್ಗಸೂಚಿಯ ಪ್ರಕಾರ ಇರಬೇಕಾದ ಜಮೀನು ಹೊಂದಿರುತ್ತಾರೆಯೇ ?<br>ಫಲಾನುಭವಿಯು ತನ್ನ ಹೆಸರಿನಲ್ಲಿರುವ ಪಹಣಿ/ಭೂ ದಾಖಲೆಯನ್ನು ಲಗತ್ತಿಸಿರುವರೇ ? | ಹೌದು/ಇಲ್ಲ<br>ಹೌದು/ಇಲ್ಲ |
| 3 | ಫಲಾನುಭವಿಯು ತನ್ನ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿರುವ ಪಹಣಿ/ಭೂ ದಾಖಲೆ ನೀಡಿದ್ದಲ್ಲಿ ಅಥವಾ ಜಂಟಿ ಖಾತೆ ಇದ್ದಲ್ಲಿ ಕುಟುಂಬದವರ ಒಪ್ಪಿಗೆ ಪತ್ರ ನೀಡಿರುವರೇ ? (ನೋಟರಿ ಕಡ್ಡಾಯವಾಗಿರುತ್ತದೆ). | ಹೌದು/ಇಲ್ಲ |
| 4 | ಫಲಾನುಭವಿಯೂ ಈರುಳ್ಳಿ ಬೆಳೆಯನ್ನು ಬೆಳೆಯುತ್ತಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ / ಇಲಾಖೆಯ ಅಧಿಕಾರಿಗಳು ನೀಡುವ ಬೆಳೆ ಧೃಢೀಕರಣ ಪತ್ರ ಲಗತ್ತಿಸಿರುವರೆ ? | ಹೌದು/ಇಲ್ಲ |
| 5 | ಘಟಕದ ಅಂದಾಜು ಪಟ್ಟಿ ಲಗತ್ತಿಸಿರುತ್ತಾರೆಯೇ ?<br>ಅಂದಾಜು ಪಟ್ಟಿಯ ಮೊತ್ತ. | ಹೌದು/ಇಲ್ಲ<br>ರೂ. |
| 6 | ಘಟಕದ ನಕ್ಷೆ ಲಗತ್ತಿರುತ್ತಾರೆಯೇ ? | ಹೌದು/ಇಲ್ಲ |
| 7 ಅ)<br>ಆ) | ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಈರುಳ್ಳಿ ಶೇಖರಣಾ ಘಟಕದ ಅಳತೆಯು ಕನಿಷ್ಟ 12x3.6x1.80x2.10 ಮೀ ಇದೆಯೇ ?<br>ಇಲ್ಲದೇ ಇದ್ದ ಪಕ್ಷದಲ್ಲಿ ಪ್ರಸ್ತಾವನೆಯಲ್ಲಿ ನೀಡಿರುವ ಘಟಕದ ಅಳತೆ ಎಷ್ಟು ? | ಹೌದು/ಇಲ್ಲ |
| 8 ಅ)<br>ಆ) | ಮಾರ್ಗಸೂಚಿಯ ಪ್ರಕಾರ ಘಟಕದ ಶೇಕರಣಾ ಘಟಕದ ಕನಿಷ್ಟ ಸಾಮರ್ಥ್ಯ 25 ಮೆಟ್ರಿಕ್ ಟನ್ ಇದೆಯೇ?<br>ಇಲ್ಲದೇ ಇದ್ದ ಪಕ್ಷದಲ್ಲಿ ಪ್ರಸ್ತಾವನೆಯಲ್ಲಿ ನೀಡಿರುವ ಘಟಕದ ಶೇಖರಣಾ ಸಾಮರ್ಥ್ಯವೆಷ್ಟು ? | ಹೌದು/ಇಲ್ಲ<br>____MT |
| 9 | ಈರುಳ್ಳಿ ಶೇಖರಣಾ ಘಟಕವೂ ಛಾವಣಿ ಹಂತದಲ್ಲಿರುವ ಛಾಯಚಿತ್ರ ಲಗತ್ತಿಸಿರುತ್ತಾರೆಯೇ ? | ಹೌದು/ಇಲ್ಲ |
| 10 | ಈರುಳ್ಳೀ ಶೇಖರಣಾ ಗೋದಾಮು ಘಟಕವನ್ನು ಈರುಳ್ಳಿ ಶೇಖರಣೆಗಾಗಿ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುತ್ತೇನೆಂದು ಹಾಗೂ ಸದರಿ ಘಟಕಕ್ಕೆ ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದನ್ನು ರೂ. 100/- ಛಾಪಾ ಕಾಗದದಲ್ಲಿ ಬರೆದುಕೊಟ್ಟು ಮುಚ್ಚಳಿಗೆ ಪತ್ರವನ್ನು ಲಗತ್ತಿಸಿದ್ದಾರೆಯೇ ? | ಹೌದು/ಇಲ್ಲ |
| 11 | ಘಟಕ ನಿರ್ಮಿಸಲು ಜಿಲ್ಲಾ ಸಮಿತಿಯ ಒಪ್ಪಿಗೆ / ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳ ಅನುಮತಿ /ಅನುಮೋದನೆ ನೀಡಿರುವ ಪತ್ರ ಲಗತ್ತಿಸಿದ್ದಾರೆಯೇ ? | ಹೌದು/ಇಲ್ಲ |
| 12 | ಈರುಳ್ಳಿ ಶೇಖರಣಾ ಘಟಕ ನಿರ್ಮಿಸಲು ಫಲಾನುಭವಿಗೆ ತೋಟಗಾರಿಕೆ ಉಪ ನಿರ್ದೇಶಕರು ನೀಡಿರುವ ಪತ್ರ ಲಗತ್ತಿಸಿದ್ದಾರೆಯೇ ? | ಹೌದು/ಇಲ್ಲ |
| 13 | ತಾಲ್ಲೂಕು ಅಧಿಕಾರಿಗಳು ತಾಕು / ಸ್ಥಳ ಪರಿಶೀಲನಾ ವರದಿ ಲಗತ್ತಿಸಿದ್ದಾರೆಯೇ ? | ಹೌದು/ಇಲ್ಲ |
| 14 | ಸದರಿ ಘಟಕಕ್ಕೆ ನೀಡಬಹುದಾದ ಸಹಾಯಧನದ ಮೊತ್ತಕ್ಕೆ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆಯೇ ? | ಹೌದು/ಇಲ್ಲ |
| 15 | ಫಲಾನುಭವಿಯು ಈರುಳ್ಳಿ ಶೇಖರಣಾ ಘಟಕದ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಸಾಲ ಮಂಜೂರಾದ ದಿನಾಂಕ, ಮೊತ್ತ, ಬ್ಯಾಂಕ್ ಸಾಲದ ಖಾತೆಯ ಸಂಖ್ಯೆ ವಿವರ ಲಗತ್ತಿಸಿರುವರೇ ? | ಹೌದು/ಇಲ್ಲ |

ಅಧಿಕಾರಿಯ ಸಹಿ :

ಅಧಿಕಾರಿಯ ಹೆಸರು :

ರೈತ ಸಂಪರ್ಕ ಕೇಂದ್ರ:

ದಿನಾಂಕ:

ಅಧಿಕಾರಿಯ ಸಹಿ:

ತಾಲ್ಲೂಕು ಅಧಿಕಾರಿ ಹೆಸರು:

(ಜಿ ಪಂ)______________

ದಿನಾಂಕ: